ಆ. ಹಾಗಿದ್ದರೆ ಇವೆರಡು ಉಪ ವಿಭಾಗಗಳ ಪ್ರದೇಶಗಳಲ್ಲಿ ತೆಂಗಿನ ಅಣೆಗಳ ನಿರ್ಮಾಣವನ್ನು ತೆಗೆದುಕೊಳ್ಳಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು):—

ಆ. ಹೌದು.

ಆ. ಸರ್ಕಾರವು ತೆಂಗಿನ ಅಣೆಗಳ ನಿರ್ಮಾಣಕ್ಕೆ ಎಲ್ಲಾ ವಿಧವಾದ ಪ್ರೋತ್ಸಾಹವನ್ನು ಕೊಡುತ್ತಿದೆ. ಮೇಲ್ಕಂಡ (ಆ) ಪ್ರಶ್ನೆಗೆ ಈ ಕೆಳಕಂಡ ವಿವರಣೆಯನ್ನು ಕೊಡಲಾಗಿದೆ.

ಉಪವಿಭಾಗದ ಹೆಸರು	ತೆಂಗಿನ ಅಣೆಗಳ ನಿರ್ಮಾಣದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿರುವ ಸಂಖ್ಯೆ	ತೆಂಗಿನ ಅಣೆಗಳು ಪೂರ್ಣಗೊಂಡಿರುವ ಸಂಖ್ಯೆ
1) ತುಮಕೂರು	1	1
2) ತಿಪಟೂರು	26	9
3) ಮಧುಗಿರಿ	ಇಲ್ಲ	ಇಲ್ಲ

ವಿಷಯ :—ಮೈಸೂರು ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ಒದಗಿಸುವುದು.

ಆ. ಮೈಸೂರು ತಾಲ್ಲೂಕಿನ ಯಾವ ಯಾವ ಹಳ್ಳಿಗೆ ಕೊಳವೆ ಬಾವಿಗಳಿಲ್ಲ ;

ಆ. ಸದ್ರಿ ಹಳ್ಳಿಗಳಿಗೆ ಕೊಳವೆ ಬಾವಿಗಳನ್ನು ಒದಗಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :—

ಆ. ಮೈಸೂರು ತಾಲ್ಲೂಕಿನಲ್ಲಿ ಬಂದಾದರೂ ಕೊಳವೆ ಬಾವಿ ಇಲ್ಲದ ಯಾವ ಹಳ್ಳಿಗಳು ಇಲ್ಲ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :—ಬಿಜಾಪುರ ಜಿಲ್ಲೆಯ ನೇಕಾರರಿಗೆ ಮುನ್ನಡೆ ಯೋಜನೆಯ ಸೌಲಭ್ಯ.

ಪ್ರ. 74 (36) ಶ್ರೀ ಮಲ್ಲಿಕಾರ್ಜುನ ವೀರಪ್ಪ ಬಿನ್ನಿ (ಗುಳೇದ್‌ಗುಡ್ಡ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಬಿಜಾಪುರ ಜಿಲ್ಲೆಯೇ ಅತ್ಯಂತ ಹೆಚ್ಚಿನ ನೇಕಾರರನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಹಾಗಾದರೆ, ವಿಜಾಪುರ ಜಿಲ್ಲೆಯ ನೇಕಾರರಿಗೆ ಮುನ್ನಡೆ ಯೋಜನೆಯ ಮೇರೆಗೆ ಹಣ ಹಂಚಲಾಗಿದೆಯೆ ;

ಇ. ಹಾಗಿದ್ದರೆ, ಮುನ್ನಡೆ ಯೋಜನೆ ಮೇರೆಗೆ ಎಷ್ಟು ಜನರಿಗೆ ಹಣ ಹಂಚಲಾಗಿದೆ ;

ಈ. ಆದರ ಮೊತ್ತವೆಷ್ಟು ? (ಕಳೆದ ಮೂರು ವರ್ಷದ ಮಾಹಿತಿಯನ್ನು ಒದಗಿಸುವುದು) ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಆ. ಹೌದು.

ಆ. ಮುನ್ನಡೆ ಯೋಜನೆ ನೇಕಾರರಿಗೆ ಅನ್ವಯಿಸುವುದಿಲ್ಲ. ಆದುದರಿಂದ ಹಣ ಹಂಚಿಲ್ಲ. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುಲ್ಲ.

ಈ. ಮೇಲಿನಂತೆ.

ಮನವಿಗಳು

ಶ್ರೀ ಧನಂಜಯಕುಮಾರ್ ವಿ.—ನಾನು ಈಗಾಗಲೇ ತಮಗೆ ಹಿಂದು ನೋಟೀಸ್ ಕಳುಹಿಸಿದ್ದೇನೆ. ಕಳೆದ 3-4 ದಿನಗಳಿಂದ ಮಂಗಳೂರಿನಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಅರಿವೂ ಇದೆ. ಅಲ್ಲಿ ಎಲ್ಲ ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು.—ಈಗಾಗಲೇ ಈ ಪ್ರಶ್ನೆಯನ್ನು ಎತ್ತಿದ್ದೀರಿ ಮತ್ತು ಮಂತ್ರಿಗಳು ಸಹ ಉತ್ತರಿಸಿದ್ದಾರೆ. ಬಹಳ ಸೀನಿಯರ್ ಮತ್ತು ಅನುಭವಿಗಳಾದವರನ್ನು ಬಿಡ್ತಿ ಕೊಟ್ಟು ಇನ್ನೊಂದು ಕಡೆಗೆ ವರ್ಗ ಮಾಡಿ ಪ್ರಿನ್ಸಿಪಾಲರಾಗಿ ಹಾಕಿದ್ದೇವೆಂದು ಹೇಳಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಹಕ್ಕು ಪತ್ರಗಳ ಬಹಿರಂಗ ಮಾರಾಟ ಎಂದು ಮುಂಜಾನೆ ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು.—ಆ ಬಗ್ಗೆ ನನಗೆ ಯಾವ ನೋಟೀಸು ಬಂದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಕಳುಹಿಸಿದ್ದೇನೆ. ಇದು ಬಹಳ ಮುಖ್ಯವಾದ ಪ್ರಶ್ನೆ ಯಾದ್ದರಿಂದ ಇದನ್ನು ದಯವಿಟ್ಟು ನಾಳೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ನೋಟೀಸ್ ಬಂದಿದ್ದರೆ ನಾಳೆ ತೆಗೆದುಕೊಳ್ಳಬಹುದು.

12. NOON

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯೇ ಒಂದು ನೋಟೀಸನ್ನು ಕಳುಹಿಸಿದ್ದೆ. ಇವತ್ತು ಅದು ಬರುತ್ತದೆಂದು ಹೇಳಿದ್ದೀರಿ. ಇವತ್ತೂ ಬರುತ್ತದೆಯೋ ಇಲ್ಲವೋ ಹೇಳಿಬಿಡಿ.

Mr. Speaker.—Sri J.H. Patel was physically present on the floor of the House.

ಶ್ರೀ ಎಂ.ಎಸ್. ಕೃಷ್ಣನ್.—ಇದು ಬಹಳ ಮುಖ್ಯವಾದ ವಿಷಯ. ನಿನ್ನೆ ದಿವಸ he was physically present. ಆದರೆ ನಾಳೆ ಉತ್ತರ ಹೇಳುತ್ತೇನೆ ಎಂದು ಹೇಳಿದರು. ಈಗ ಕೇಳಿದರೆ ಅವರು ಸಭೆಯಲ್ಲಿ ಇಲ್ಲ ಎಂದು ಹೇಳುತ್ತೀರಿ. You must come to our protection and ensure his physical presence.

Mr. Speaker.—I request you to come to may protection. The rule dose not permit me to force the Minister. You have brought it to his notice aud the Minister said he is going to make....

ಶ್ರೀ ಎಂ.ಎಸ್. ಕೃಷ್ಣನ್.—ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಿಲ್ಲ ಎಂದು ಹೇಳಲಿಲ್ಲ. ನಿನ್ನೆ ಕೇಳಿದಾಗ ನಾಳೆ ದಿವಸ ಮಾಡುತ್ತೇನೆ ಎಂದು ಹೇಳಿದರು. ಆದರೆ ಇವತ್ತು ಸಭೆಯಲ್ಲಿಲ್ಲ. ನಾಳೆಯೂ ಇರುತ್ತಾರೋ ಇಲ್ಲವೊ ಗೊತ್ತಿಲ್ಲ. ಮಾಡುವುದಿಲ್ಲ ಎಂದು ಹೇಳಿದರೆ ಅದು ಬೇರೆ ವಿಚಾರ. ಆದರೆ ಮಾಡುತ್ತೇವೆ ಎಂದು ಈ ರೀತಿ ತಪ್ಪಿಸಿಕೊಳ್ಳುವುದು ಏತಕ್ಕೆ ?

ಅಧ್ಯಕ್ಷರು.—ಆ ರೀತಿ ಅನುಮಾನಕ್ಕೆ ಆವಕಾಶವಿಲ್ಲ. ವಿಚಾರಿಸೋಣ.

ಶ್ರೀ ಎಂ.ಎಸ್. ಕೃಷ್ಣನ್.—ಸ್ಟೇಟ್‌ಮೆಂಟ್ ಮಾಡುವುದಕ್ಕಾಗದಿದ್ದರೆ ಆಗುವುದಿಲ್ಲ ಎಂದು ಹೇಳಲಿ. ಮಾಡುತ್ತೇನೆಂದು ಹೇಳಿ ಏತಕ್ಕೆ ತಪ್ಪಿಸಿಕೊಳ್ಳಬೇಕು ?

ಶ್ರೀ ಧನಂಜಯಕುಮಾರ್ ವಿ.—ನಿಯಮದ ಪ್ರಕಾರ ನಾನು ನೋಟೀಸ್ ಕಳುಹಿಸಿದ್ದರಿಂದ ನನಗೆ ಆವಕಾಶ ಸಿಗುತ್ತಿಲ್ಲ ಎಂದು ಕಾಣುತ್ತದೆ. ನಾನು ಕಳುಹಿಸಿದ ವಿಚಾರವನ್ನು ದಯವಿಟ್ಟು ತೆಗೆದು ಕೊಳ್ಳಬೇಕು.

ಅಧ್ಯಕ್ಷರು.—ನೀವು ಕಳುಹಿಸಿದ ನೋಟೀಸಿಗೆ ಉತ್ತರ ಬಂದಿದ್ದರಿಂದ ಪ್ರಸ್ತಾಪ ಮಾಡವುದು ಬೇಡ ಎಂದು ಹೇಳಿದೆ

ಶ್ರೀ ಧನಂಜಯಕುಮಾರ್ ವಿ.— ಅಲ್ಲಿ ಮೂರು ನಾಲ್ಕು ದಿವಸಗಳಿಂದ ಮುಷ್ಕರ ನಡೆಯುತ್ತಿದೆ. ಮಂಗಳೂರು ಏನೂ ದೂರ ಇಲ್ಲ. ಟೆಲಿಫೋನ್ ಸಂಪರ್ಕ ಮಾಡಿ ಮಾಹಿತಿ ತರಿಸಬಹುದು. ಪರಿಸ್ಥಿತಿಯನ್ನು ತಿಳಿದುಕೊಂಡು, ದಯವಿಟ್ಟು ಸಂಜೆಯೊಳಗೆ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ವರ್ಗಕ್ಕೂ ಮುಷ್ಕರ ಮಾಡಿ ನಿಲುವಳಿ ಸೂಚನೆ ತಂದರೆ ಸರ್ಕಾರ ನಡೆಸುವುದು ಕಷ್ಟವಾಗುತ್ತದೆ.

ಶ್ರೀ ಬಿ.ಎಸ್. ಯಡಿಯಾರಪ್ಪ.—ಕ್ರಮ ತೆಗೆದುಕೊಂಡಿದ್ದರೆ ಸತ್ಯಾಗ್ರಹ ಮಾಡುವ ಪರಿಸ್ಥಿತಿ ಬರುತ್ತಿರಲಿಲ್ಲ. ಸತ್ಯಾಗ್ರಹ ಮಾಡದೆ ಬೇರೆ ದಾರಿ ಇಲ್ಲ.

(ಗೊಂದಲ)

ಶ್ರೀ ಬಿ. ರಾಚಯ್ಯ.—ನಾನು ಅಧ್ಯಕ್ಷರ ಅನುಮತಿ ಪಡೆಮ ನಿಂತುಕೊಂಡಿದ್ದೇನೆ, ನಾನು ಈಲ್ ಆಗಿಲ್ಲ. 1969ರಿಂದ ಅವರು ಒಂದೇ ಕಾಲೇಜಿನಲ್ಲಿದ್ದರು. ಜೊತೆಗೆ ಅವರು ಸೀನಿಯರ್ ಉಪಾಧ್ಯಾಯರಾಗಿದ್ದರು. ಅವರನ್ನು ಇನ್ನೊಂದು ಪ್ರಥಮ ದರ್ಜೆ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಹಾಕಬೇಕಾಯಿತು. ಬೇರೆ ಜಿಲ್ಲೆಗೆ ಹಾಕಿದರೆ ಕಷ್ಟವಾಗುತ್ತದೆ ಎಂದು ಬೆಳ್ತಂಗಡಿ ಕಾಲೇಜಿಗೆ ಹಾಕಿದ್ದೇವೆ. ಅದಕ್ಕೆ ಮುಷ್ಕರ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಇಂಥ ವಿಷಯಗಳಿಗೆಲ್ಲಾ ಮುಷ್ಕರ ಮಾಡಿಕೊಂಡು ಹೋದರೆ ಕಾಲೇಜು ನಡೆಸುವುದು ಕಷ್ಟವಾಗುತ್ತದೆಂದು ಹೇಳಿದ್ದೇನೆ. ಈ ರೀತಿ ಕಾಲೇಜಿನಿಂದ ಕಾಲೇಜಿಗೆ ಅನುಭವಿಗಳನ್ನು 5 ವರ್ಷ ತುಂಬಿದ ಮೇಲೂ ಕೂಡ ಹಾಕದೇ ಇದ್ದರೆ ಹೇಗೆ ಕೆಲಸ ಮಾಡವುದು ? ಶ್ರೀ ಬಂಗಾರಪ್ಪನವರೂ ಅಧಿಕಾರ ನಡೆಸಿದ್ದಾರೆ. ಅವರು ಹೇಳಲಿ.

ಶ್ರೀ ಧನಂಜಯಕುಮಾರ್ ವಿ.—ಸಾವಿರಾರು ರೂಪಾಯಿ ಖರ್ಚು ಮಾಡಿ ಶಿಕ್ಷಣ ಪಡೆಯಲಿಕ್ಕೆ ವಿದ್ಯಾರ್ಥಿಗಳು ಕಾಲೇಜಿಗೆ ಬಂದರೆ ಅವರಿಗೆ ಸರಿಯಾದ ಶಿಕ್ಷಣ ವ್ಯವಸ್ಥೆ ಮಾಡದೇ ಇರುವ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಹಕ್ಕಿಲ್ಲ ಎಂದು ನಾನು ಪ್ರತಿಪಾದನೆ ಮಾಡಬೇಕ್ಕಾಗುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಲೆಕ್ಚರರ್ಸ್, ರೀಡರ್ಸ್, ಮತ್ತು ಪ್ರೊಫೇಸರ್ಸ್ ಹುದ್ದೆಗಳಲ್ಲಿ ಖಾಲಿ ಇಟ್ಟಿದ್ದಾರೆ. ಖಾಸಗಿಯವರು ಯಾರಾದರೂ ಆ ರೀತಿ ಮಾಡಿದರೆ.....

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ. ಭಾಷಣ ಬೇಡ.

ಶ್ರೀ ಎಸ್. ಬಂಗಾರಪ್ಪ.—ಒಂದು ನಿಮಿಷ ಅವಕಾಶ ಕೊಡುವಹಾಗಿದ್ದರೆ.....

ಶ್ರೀ ಧನಂಜಯಕುಮಾರ್ ವಿ.—ಬೇರೆ ಏನಾದರೂ ವ್ಯವಸ್ಥೆ ಮಾಡುತ್ತೇವೆಂಬ ಭರವಸೆ

ಕೊಡಬೇಕು. ಮಾನ್ಯ ಶಿಕ್ಷಣ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡಮೇಲೆ ವಿದ್ಯಾರ್ಥಿಗಳ ಮುಷ್ಕರವನ್ನು ಅವರು ಎದುರಿಸಿಲ್ಲ. ಆದ್ದರಿಂದ ಅವರಿಗೆ ವಿಷಯ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ .—ಮಾನ್ಯ ಅಧ್ಯಕ್ಷರೇ.....

Mr. Speaker :—I don't allow these things, please, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ .—ನಾನೂ ನಾಲ್ಕು ದಿವಸಗಳ ಹಿಂದೆ ಒಂದು ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು .—ದಯವಿಟ್ಟು ಕುಳಿತುಕೊಳ್ಳಿ. ವಿರೋಧಪಕ್ಷದ ನಾಯಕರನ್ನು ನಾನು ಕರೆದಿದ್ದೇನೆ.

ಶ್ರೀ ಮಿ. ವೀರಪ್ಪ ಮೊಯಿಲಿ .—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 28-7-80ರಂದು.....

ಶ್ರೀ ಎಸ್. ಬಂಗಾರಪ್ಪ .—ಮಾನ್ಯ ಅಧ್ಯಕ್ಷರೆ, ರಾಚಯ್ಯನವರು ಉತ್ತರ ಕೊಡುವಾಗ ಕ್ರತಿಯೊಂದು ವಿಚಾರಕ್ಕೂ ಪ್ರಸ್ತಾಪ ಮಾಡುತ್ತಾ ಹೋದರೆ ಸರ್ಕಾರ ನಡೆಸುವುದು ಕಷ್ಟವಾಗುತ್ತದೆ ಂದು ಹೇಳಿದರು.

ಅಧ್ಯಕ್ಷರು .—ಅವರು ಪ್ರತಿಯೊಂದು ವರ್ಗಕ್ಕೂ ಎಂದು ಹೇಳಿದ್ದಾರೆ.

ಶ್ರೀ ಎಸ್ ಬಂಗಾರಪ್ಪ .—ಪ್ರತಿ ವರ್ಗದ ಬಗ್ಗೆ ಪ್ರಸ್ತಾಪ ಮಾಡಬೇಕು ಎಂಬುದು ನಮ್ಮ ಉದ್ದೇಶವಲ್ಲ.

ಅಧ್ಯಕ್ಷರು .—ವರ್ಗ ಎಂದರೆ ಟ್ರಾನ್ಸ್‌ಫರ್ ಎಂದು.

ಶ್ರೀ ಎಸ್. ಬಂಗಾರಪ್ಪ .—ಟ್ರಾನ್ಸ್‌ಫರ್ ಎಂಬ ಅರ್ಥದಲ್ಲಿ ಹೇಳಿದರೆ ಸರಿ. ಆದರೆ ವರ್ಗ ಎಂದರೆ ಕ್ಲಾಸ್ ಎಂಬ ಅರ್ಥದಲ್ಲಿ ಹೇಳಿದರೇನೋ ಎಂದು ತಿಳಿದುಕೊಂಡಿದ್ದೆ.

ಶ್ರೀ ಬಿ. ರಾಚಯ್ಯ .—ವರ್ಗ ಎಂದರೆ ಟ್ರಾನ್ಸ್‌ಫರ್.

ಶ್ರೀ ಎಸ್. ಬಂಗಾರಪ್ಪ .—ಹಾಗಾದರೆ ಸರಿ. ಬೇರೆ ಅರ್ಥದಲ್ಲಿ ಹೇಳಿದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂಬ ಉದ್ದೇಶದಿಂದ ಹೇಳಿದೆ.

ಶ್ರೀ ವಸಂತ ಬಂಗೇರ .—ಮಾನ್ಯ ಅಧ್ಯಕ್ಷರು ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು .—ಅವಕಾಶ ಕೊಡುವುದಕ್ಕಾಗುವುದಿಲ್ಲ ಕುಳಿತುಕೊಳ್ಳಿ.

ಶ್ರೀ ವಸಂತ ಬಂಗೇರ .—ನನ್ನ ಸ್ವರ ಬಿದ್ದುಹೋಗಿದೆ. ದಯವಿಟ್ಟು ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು. ಮಾನ್ಯ ಮಂತ್ರಿಗಳು ಬೆಳ್ತಂಗಡಿ ತಾಲ್ಲೂಕಿಗೆ ವರ್ಗ ಮಾಡಿದ್ದಾರೆ ಎಂದು ಹೇಳಿದರು. ಬೆಳ್ತಂಗಡಿ ಕಾಲೇಜನ್ನು ಮಾನ್ಯ ಮಂತ್ರಿಗಳು ಬಂದು ಉದ್ಘಾಟನೆ ಮಾಡಿದರು. ಆದರೆ ಇಷ್ಟರವರೆಗೂ ಕಾಲೇಜು ಪ್ರಾರಂಭ ಆಗಿಲ್ಲ.

Mr. Speaker :—You have not given notice. I don't allow it. Nothing will go on record. You please give notice.

ಶ್ರೀ ವಸಂತ ಬಂಗೇರ .—ನಾನು ಬಿಡುವುದಿಲ್ಲ. ನನಗೆ ಅವಕಾಶ ಕೊಡಲೇಬೇಕು.

Mr. Speaker :—You cannot raise the subject. No notice is there. I have not received notice. You cannot force me like that. Then I will have to act according to the Rules of Procedure. You shall not. You cannot shout like that.

ಶ್ರೀ ಬಿ.ಎಸ್. ಯಡಿಯಾರಪ್ಪ .—ಅವರ ಕಳಕಳಿ ಏನೆಂದರೆ.....

ಅಧ್ಯಕ್ಷರು .—ಕಳಕಳಿ ಇದ್ದರೆ ನೋಟೀಸ್ ಕಳುಹಿಸಲಿ, ಚರ್ಚೆ ಮಾಡೋಣ. I have called the Leader of the Opposition. There should be some limit to it.

ಶ್ರೀ ಎಸ್. ಸೂರ್ಯನಾರಾಯಣರಾವ್ .—ಮಾನ್ಯ ರಾಮಭಟ್ಟರು ಮತ್ತು ಯಡಿಯಾರಪ್ಪನವರು ಅನುಭವಸ್ಥರು. ಅವರು ಮಾನ್ಯ ಸದಸ್ಯರಿಗೆ ಶಿಕ್ಷಣ ಕೊಡಬೇಕು.

ಶ್ರೀ ಯಡಿಯಾರಪ್ಪ .—ಅವರು ಬೇರೆ ಏನೂ ಹೆಚ್ಚಾಗಿ ಹೇಳುತ್ತಿಲ್ಲ. ಕಾಲೇಜಿನ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದಾರೆ.

Mr. Speaker :—This is not the way, please. I am so sorry about it, I have called the Leader of Opposition:

ನಿಯಮ 334ರ ಮೇರೆಗೆ

ವಿಷಯ .—(i)ಕುಂದಾಪುರದಲ್ಲಿ ಓರ್ವ ಬಾಲಕನ ಮೇಲೆ ಪೋಲಿಸಿನವರು ದೌರ್ಜನ್ಯ ನಡೆಸಿದರು ಎಂಬ ಬಗ್ಗೆ